**ಸಾಕ್ಷಿಗೆ ದಿನಾಂಕಃ 04.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಕೆ.ಎಸ್.ಪಿ. ವಕೀಲರಿಂದಃ**

ಸಾಕ್ಷಿಗೆ ಕೆಂಚೇಗೌಡರ ಹೆಸರಿನಲ್ಲಿರುವ ಅಸೆಸ್ ಮೆಂಟ್ ದಾಖಲೆಯ ದೃಡೀಕೃತ ನಕಲನ್ನು ತೋರಿಸಲಾಗಿ ನೋಡಿ ಒಪ್ಪಿದ್ದು, ಅದನ್ನು ನಿ.ಡಿ.5 ಎಂದು ಗುರುತಿಸಲಾಯಿತು. ಚೆನ್ನಮ್ಮ ಮತ್ತು ಜಯರಾಮು ರವರ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಚೆನ್ನಮ್ಮ ಮತ್ತು ಜಯರಾಮು ರವರ ಹೆಸರಿನಲ್ಲಿ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಚೆನ್ನಮ್ಮ ಮತ್ತು ಜಯರಾಮು ರವರ ಹೆಸರಿನಲ್ಲಿ ಖಾತೆ ಇದ್ದ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಚೆನ್ನಮ್ಮ ಮತ್ತು ಜಯರಾಮು ರವರ ಹೆಸರಿನಲ್ಲಿ ಖಾತೆ ದಾಖಲೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಕಾನೂನುಬದ್ಧ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ.2 ರಿಂದ 21ರ ದಾಖಲೆಗಳ ಪ್ರಕಾರ ಕೆಂಚೇಗೌಡರ ಹೆಸರಿನಲ್ಲಿ ಕಂದಾಯ ಪಾವತಿ ಮಾಡಿರುತ್ತೇನೆ ಎಂದರೆ ಸರಿ. ನಿ.ಪಿ.16ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.16ಕ್ಕೆ ಕಾನೂನುಬದ್ಧ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ನಮ್ಮ ತಅಯಿಯ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇರಲಿಲ್ಲ ಎಂದರೆ ಸರಿ. 3 ವರ್ಷದ ಹಿಂದೆ ಪ್ರತಿವಾದಿಯನ್ನು ನಮ್ಮ ಜಾಗದಲ್ಲಿ ತಿರುಗಾಡಬೇಡಿ ಎಂದು ಹೇಳಿರುತ್ತೇನೆ. ವಾದ ಪತ್ರದಲ್ಲಿ ಸದರಿ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿ. ನಿ.ಪಿ.16ಕ್ಕೆ ಪೂರಕವಾಗಿ ಖಾತೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಪುರಸಭೆಯವರು ಅಳತೆ ಮಾಡಲು ಬಂದಾಗ ಪ್ರತಿವಾದಿಗಳು ತಕರಾರು ಸಲ್ಲಿಸಿದ ಕಾರಣ ಅಳತೆ ಮಾಡಿರುವುದಿಲ್ಲ. ಈ ಸಂಬಂಧ ದೂರನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಗಳು ಅಡ್ಡಿಪಡಿಸಿದ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ನಿ.ಪಿ.1ರಲ್ಲಿ ಪ್ರತಿವಾದಿಗಳು ತಕರಾರು ಮಾಡಿದ ಬಗ್ಗೆ ನಮೂದು ಇರುವುದಿಲ್ಲ ಎಂದೆ ಸರಿಯಲ್ಲ. ನಿ.ಪಿ.1ರಲ್ಲಿ ದಾವಾ ಸ್ವತ್ತಿನ ಖಾತಾ ಸಂ.256/245 ವಿಸ್ತೀರ್ಣ 56 x 43 ಅಡಿ

ಸ್ವತ್ತು ಕೆಂಚೇಗೌಡರ ಹೆಸರಿನಲ್ಲಿ ಇರುವುದರಿಂದ ಅಳತೆ ಮಾಡಲು ಬರುವುದಿಲ್ಲ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ನಮ್ಮ ತಾಯಿಯ ಹಾಗೂ ಜಯರಾಮು ಮತ್ತು ಚೆನ್ನಮ್ಮ ರವರ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಮಾಲಿಕರಾಗಿರುವುದಿಲ್ಲ ಹಾಗೂ ಸ್ವಾಧೀನಾನುಭವವನ್ನು ಹೊಂದಿಲ್ಲದ ಕಾರಣ ಈ ದಾವೆಯು ಊರ್ಜಿತ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**